ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಮೂಡಿಗೆರೆ

ಸಿ.ಸಿ.ನಂಃ **1621/2023**

| | | |
|---|---|---|
| ಪಿರ್ಯಾದಿ | : | ಡಿ.ಬಿ.ಜಯರಾಂ ಬಿನ್ ಡಿ.ಎಸ್ ಬಿಳಿಗೌಡ,<br>ವಯಸ್ಸು ಸುಮಾರು 50 ವರ್ಷ,<br>ವಾಸಃ ದೇವವೃಂದ ಗ್ರಾಮ ಮತ್ತು ಅಂಚೆ,<br>ಗೋಣಿಬೀಡು ಹೋಬಳಿ, ಮೂಡಿಗೆರೆ<br>ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ |

ವಿರುದ್ಧ

| | | |
|---|---|---|
| ಆರೋಪಿ | : | ಸುನಿಲ್ ಕುಮಾರ್ ಜೆ.ಡಿ. ಬಿನ್ ದ್ಯಾವೇಗೌಡ,<br>ವಯಸ್ಸು ಸುಮಾರು 48 ವರ್ಷ,<br>ವಾಸಃ ಜೇನುಬೈಲು ಗ್ರಾಮ, ಜೋಗಣ್ಣನಕೆರೆ<br>ಅಂಚೆ, ಗೋಣಿಬೀಡು ಹೋಬಳಿ,<br>ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿ ಹೇಳಿಕೆ

ಪ್ರಶ್ನೆ.1) ಫಿರ್ಯಾದುದಾರರ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ ಕೇಳಿದ್ದೇನೆ

ಪ್ರಶ್ನೆ.2) ಫ್ರಾಸಾ-1 ಡಿ.ಬಿ.ಜಯರಾಂ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಪಿರ್ಯಾದಿಯಿಂದ ನಿಮ್ಮ ತುರ್ತು ಹಣದ ಅವಶ್ಯಕತೆಗಳಿಗೋಸ್ಕರ ಅವರಿಂದ 9,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಜೋಗಣ್ಣನಕೆರೆ ಶಾಖೆಯ ಚೆಕ್ ಸಂಖ್ಯೆ988348, ದಿನಾಂಕ25.08.2023, ರೂ.9,00,000/- ಎಂದು ನಮೂದಿಸಿ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆ.3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ಕನ್ನು ಫಿರ್ಯಾದಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು

ಹಣವಿರುವುದಿಲ್ಲ (Funds insufficient) ಎಂದು ಹಿಂಬರಹ ಎಂದು ಹಿಂಬರಹದ ಮೂಲಕ ಹಿಂದಿರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆ.4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿನಾಂಕಃ 20.09.2023 ರಂದು ನಿಮಗೆ ಕಾನೂನುಬದ್ಧ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 27.09.2023 ರಂದು ತಲುಪಿದ್ದರೂ ನೀವು ನೋಟೀಸನ್ನು ಸ್ವೀಕರಿಸದ ಕಾರಣ ದಿನಾಂಕಃ 05.10.2023 ರಂದು ವಾಪಸ್ ಬಂದಿರುತ್ತದೆ ಮತ್ತು ನೀವು ಸದರಿ ಹಣವನ್ನು ಪಾವತಿ ಮಾಡಿರುವುದಿಲ್ಲ ಹಾಗೂ ಆ ನೋಟೀಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆ.5) ನಿಮ್ಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಆರೋಪಿಯ ಉತ್ತರಃ ನಾನು ಪಿರ್ಯಾದಿಯಿಂದ ಹಣ ಪಡೆದಿಲ್ಲ. ಉದುಸೆ ಚಂದ್ರೇಗೌಡರಿಗೆ ಕೊಟ್ಟ ಚೆಕ್ ಬಳಸಿ ಪಿರ್ಯಾದಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ

ಪ್ರಶ್ನೆ.6) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಆರೋಪಿಯ ಉತ್ತರಃ ಇದೆ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

ಸಹಿ/-

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ.
ದಿನಾಂಕಃ 17.09.2025.